ಸೆಲೆಬ್ರಿಟಿ

## ಕ್ರಿಸ್ಟೀನಾಳ ಸಲಿಂಗ ಮೋಹ



ಗಾಯಕಿ ಕ್ರಿಸ್ಟೀನಾ ಅಗುಲೆರಾಳಿಗೆ ಗಂಡ ಜೋರ್ಡಾನ್ ಬ್ರಟ್ಮ ಸೋಡಾ ಚೀಟಿ ಕೊಡಲು ಹೊರಟಿದ್ದು ಹಳೇ ಸುದ್ದಿ. ಈ ಸೋಡಾಚೀಟಿಗೆ ಕಾರಣ ವೇನು.. ಎನ್ನುವುದು ಈಗ ಬಹಿರಂಗವಾಗಿದೆ. 29ರ ಹರೆಯದ ಕ್ರಿಸ್ಟೀನಾ ತನ್ನ ಬಿರಿಮೈ 'ಪೋಸ್'ಗಳಿಗೆ ಹೆಸರುವಾಸಿ. ಅದೇನೂ ಗಂಡ ಜೋರ್ಡಾನನ ತಲೆ ಕೆಡಿಸಿಲ್ಲವಂತೆ. ಬದಲಾಗಿ ಕ್ರಿಸ್ಟೀನಾಳ ಸಲಿಂಗಕಾಮಿ ಗೆಳೆಯ ಸ್ಯಾಮ್ ರಾನ್ಸನ್ ಈ ಘಟಸ್ಫೋಟಕ್ಕೆ ಕಾರಣವಂತೆ. ಹೊಸ ಮ್ಯೂಸಿಕ್ ಆಲ್ಬಂಗೆ ಸಲಿಂಗಕಾಮ ವನ್ನೇ ವಿಷಯವಾಗಿಸಿಕೊಂಡಿದ್ದ ಕ್ರಿಸ್ಟೀನಾ ಸಲಿಂಗಕಾಮದ ಬಗ್ಗೆ ಹೆಚ್ಚು ಒಲವು ಬೆಳೆಸಿಕೊಂಡದ್ದು ತಮ್ಮ ಸಂಬಂಧದ ನಡುವೆ ಬಿರುಕಿಗೆ ಕಾರಣವಾ ಯಿತು ಎಂದು ಸಂಗೀತ ನಿರ್ದೇಶಕ ಜೋರ್ಡಾನ್ ಬಹಿರಂಗ ಪಡಿಸಿದ್ದಾನೆ.

'ಇದೆಲ್ಲ ಕಳ್ಳನೆಪ. ಕೇಸಿನಲ್ಲಿ ಪರಿಹಾರದ ಹಣ ತಗ್ಗಿಸಲು ಜೋರ್ಡಾನ್ ಹೂಡಿರುವ ಆಟ. ಆತ ನನ್ನ ಮನಸ್ಸಿನ ಮೇಲೆ ಅಳಿಸಲಾಗದ ಗಾಯ ಮಾಡಿ ದ್ದಾನೆ' ಎಂದು ಕ್ರಿಸ್ಟೀನಾ ಕಿಡಿ ಕಾರಿದ್ದಾಳೆ. ಗಾಯಕಿ ಎಂದ ಮೇಲೆ, ಅದರಲ್ಲೂ ಗಂಡ ಸಂಗೀತ ನಿರ್ದೇಶಕ ಅಂದ ಮೇಲೆ ಗಾಯವಾಗೋದು ಸಹಜವೇ ಬಿಡಿ.. ಎನ್ನಬಹುದೆ? ಸದ್ಯಕ್ಕೆ ಸ್ಯಾಮ್ ಜತೆ ಕ್ರಿಸ್ಟೀನಾ ಗುಟ್ಟಾಗಿ ಹಾಗೂ ಆತ್ಮೀ ಯತೆಯಿಂದ ಓಡಾಡುವುದು ನೋಡಿದರೆ ಜೋರ್ಡಾನ್ ನೀಡಿದ ಕಾರಣವೇ ನಿಜವೇನೋ ಅನ್ನಿಸುತ್ತದೆ.



## ಡ್ಯಾಮ್ ಡ್ಯಾಮೇಜ್!

ಸಮರಕಲೆ ಪ್ರವೀಣ ವ್ಯಾನ್ ಡ್ಯಾಮ್ ಹಾಲಿವುಡ್‌ನ ಅತ್ಯಂತ ಜನಪ್ರಿಯ ಆ್ಯಕ್ಷನ್ ಹೀರೊ. ಸಿನಿಮಾದಲ್ಲಿ ಎದುರಿಗೆ ಸಿಕ್ಕವರ ನ್ನೆಲ್ಲ ಡಿಶುಂ ಡಿಶುಂ ಮಾಡಿ ಮುಗಿಸಿಬಿಡುವ ಡ್ಯಾಮ್ ಕಳೆದ ವಾರ ತನ್ನದೇ ಹೃದಯದ ಹೊಡೆತಕ್ಕೆ ಕಂಗಾಲಾಗಿದ್ದಾನೆ. 50ರ ಹರೆ ಯದ ಡ್ಯಾಮ್, 'ವೆಪನ್ ಇನ್ ನ್ಯೂ ಒರ್ಲೀನ್ಸ್' ಚಿತ್ರದ ಶೂಟಿಂಗ್ ವೇಳೆ ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆ ಸೇರಿದ್ದಾನೆ. ಆಸ್ಪತ್ರೆಯ ಚಿಕಿತ್ಸೆಯ ಬಳಿಕ ವೈದ್ಯರು ಒಂದು ತಿಂಗಳು ರೆಸ್ಟ್ ತಗೊಳ್ಳಲು ಸೂಚಿಸಿದ್ದಾರಂತೆ.

ಬ್ಲಡ್ ಸ್ಪೋರ್ಟ್, ಕಿಕ್ ಬಾಕ್ಸರ್, ಡಬಲ್ ಇಂಪ್ಯಾಕ್ಟ್, ಹಾರ್ಡ್ ಟಾರ್ಗೆಟ್, ಸ್ಟ್ರೀಟ್ ಫೈಟರ್- ಹೀಗೆ ಡ್ಯಾಮ್‌ನ ಚಿತ್ರದ ಹೆಸರುಗಳು ನೇರವಾಗಿ ಕದನಕ್ಕೇ ಇಳಿಯುತ್ತವೆ. 94ರಲ್ಲಿ ಬಿಡುಗಡೆಯಾದ ಟೈಂ ಕಾಪ್ ಎಂಬ ಸಿನಿಮಾ 100 ದಶಲಕ್ಷ ಡಾಲರ್ ಹಣ ದೋಚಿ ಬಾಕ್ಸಾಫೀಸ್ ಚಿಂದಿ ಮಾಡಿದ ಬಳಿಕ ಡ್ಯಾಮ್‌ನನ್ನು ಹಿಡಿಯುವವರೇ ಇಲ್ಲವಾಗಿತ್ತು.

ಸದ್ಯಕ್ಕೆ ಶೂಟಿಂಗ್ ಕ್ಯಾನ್ಸಲ್ ಆಗಿದೆ. ಪತ್ನಿ- ಮಕ್ಕಳ ಜತೆ ಡ್ಯಾಮ್ ಬೆಲ್ಜಿಯಂನ ಮನೆಯಲ್ಲಿ ರಜಾ ಕಳೆಯುತ್ತಿದ್ದಾನಂತೆ.

★ ಬಿಂದು

Pure Kanchee Wedding Sarees Collections

samyakk™
eternally graceful

A unit of Mahaveer Salection
'D' Souza Circle, Richmond Road
Opp. Lifestyle, Bangalore - 560 025
Ph. : 080 41113330/41227442
Web. : www.samyakk.com

Sarees-Ghagras-Kanjivaram-Salwar Suits

Nakshatra

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65